ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 270 ಗ್ರಾಪಂಅ 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:27-07-2021

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ತಯಾರಿಕೆ – ಕುರಿತು.

**ಉಲ್ಲೇಖ**

1. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:06.02.2021 ರಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆಯ ನಡವಳಿ.
2. ಸರ್ಕಾರ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:05 ಮತ್ತು 06 ಏಪ್ರಿಲ್–2021 ರಂದು ನಡೆದ ಕಾರ್ಯಾಗಾರದ ನಡವಳಿ.
3. ದಿನಾಂಕ:07-04-2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
4. ದಿನಾಂಕ:14-06-2021 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆದ ಸಭೆಯ ನಡವಳಿ.
5. ದಿನಾಂಕ: 02 ಮತ್ತು 03 ಜುಲೈ–2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಎ.ಎನ್.ಎಸ್.ಎಸ್.ಐ.ಆರ್.ಡಿ., ಮೈಸೂರಿನಲ್ಲಿ ನಡೆದ ಕಾರ್ಯಾಗಾರದ ನಿರ್ಣಯಗಳು.
6. ದಿನಾಂಕ: 15-7-2021 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯಗಳು.

* * * * *

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 309–ಬಿ ರನ್ವಯ ಗ್ರಾಮ ಪಂಚಾಯಿತಿಗಳು ಹೊಸದಾಗಿ ರಚನೆಯಾದ ಕೂಡಲೆ 5 ವರ್ಷಗಳ ದೂರದೃಷ್ಟಿ ಯೋಜನೆಯನ್ನು 3 ತಿಂಗಳಲ್ಲಿ ತಯಾರಿಸುವುದು ಕಡ್ಡಾಯವಾಗಿರುತ್ತದೆ. ಸ್ವಯಂ ಆಡಳಿತ ಸಂಸ್ಥೆಗಳಾದ ಪಂಚಾಯಿತಿಗಳು ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುವುದು ಮತ್ತು ಸಾಮಾಜಿಕ ನ್ಯಾಯ ಸ್ಥಾಪನೆಗಾಗಿ, ಸುರಕ್ಷಿತವಲ್ಲದ ವರ್ಗಗಳ ಹಿತಾಸಕ್ತಿಗೆ ಒತ್ತು ನೀಡಿ ಎಲ್ಲಾ ವರ್ಗಗಳ ಜನರ ಅಗತ್ಯತೆಗಳನ್ನು ನಿರ್ಧರಿಸಿ ನಿರ್ಣಯಿಸುವ ಮತ್ತು ಅವುಗಳಿಗೆ ಆದ್ಯತೆ ನಿಗದಿ ಮಾಡಿ ತಳಮಟ್ಟದಿಂದ ಅಭಿವೃದ್ಧಿಯಾಗುವಂತೆ ಯೋಜನೆಗಳನ್ನು ಸಿದ್ಧಪಡಿಸಬೇಕಾಗಿರುತ್ತದೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯು ದೂರದೃಷ್ಟಿ ಅಭಿವೃದ್ಧಿ ಯೋಜನೆಯನ್ನು ತನ್ನ ಅವಧಿಯ 5 ವರ್ಷಗಳಿಗಾಗಿ ಪ್ರತಿ ವರ್ಷಕ್ಕೆ ಅಗತ್ಯ ಆಧಾರಿತ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸಲು ಅನುಕೂಲವಾಗುವಂತೆ ರೂಪಿಸಬೇಕಾಗಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:06-02-2021 ರಂದು ನಡೆದ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆಯಲ್ಲಿ ಸ್ವಾತಂತ್ರ್ಯೋತ್ಸವದ 75ನೇ ವರ್ಷಾಚರಣೆ ನೆನಪಿಗಾಗಿ 2021-22 ನೇ ಸಾಲಿನಿಂದ 2025-26 ನೇ ಸಾಲಿನವರೆವಿಗೆ 5 ವರ್ಷದ ಅವಧಿಗೆ ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯನ್ನು ತಯಾರಿಸಿ "ಜನರ ಯೋಜನೆ" ಹೆಸರಿನಲ್ಲಿ 2021-22ನೇ ಸಾಲಿನಲ್ಲಿ ಜಾರಿಗೊಳಿಸಲು ತೀರ್ಮಾನಿಸಲಾಗಿದೆ.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಅಭಿವೃದ್ಧಿ ಮೈಲುಗಲ್ಲುಗಳನ್ನು ಸಾಧಿಸಲು ಸಹಕಾರಿಯಾಗುವಂತೆ, ಮಾನವ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಗ್ರಾಮ ಪಂಚಾಯಿತಿಗಳು ಪರಿಣಾಮಕಾರಿಯಾಗಿ ದೂರದೃಷ್ಟಿ ಯೋಜನೆಯನ್ನು ಸಿದ್ದಪಡಿಸುವುದು. ಇದರಿಂದ ಸಾಧನೆಯ ಹೆಜ್ಜೆ ಗುರುತನ್ನು ಶೀಘ್ರ, ಮಧ್ಯಮ ಮತ್ತು ದೀರ್ಘಾವಧಿಯಲ್ಲಿ ಹೊರಹೊಮ್ಮುವುದನ್ನು ನಿರೀಕ್ಷಿಸಲ್ಪಟ್ಟಿದೆ.

ಈ ದೂರದೃಷ್ಟಿ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ರಾಜ್ಯ ವ್ಯಾಪಿ ಗ್ರಾಮ ಪಂಚಾಯಿತಿಗಳು ಒಂದೇ ರೀತಿಯ ಯೋಜನೆಯನ್ನು ಸಿದ್ಧಪಡಿಸಲಾಗುವುದಿಲ್ಲ. ಹಾಗಾಗಿ, ಸದರಿ ಗ್ರಾಮ ಪಂಚಾಯಿತಿಯ ವಸ್ತುಸ್ಥಿತಿ, ಅಲ್ಲಿಯ ಪ್ರಾದೇಶಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಪರಿಸರ ಸಂಬಂಧಿ ಅಂಶಗಳನ್ನು ಗಮನದಲ್ಲಿರಿಸಿಕೊಂಡು ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುವುದು.

ದೂರದೃಷ್ಟಿ ಯೋಜನೆಯನ್ನು ವಲಯಗಳಾದ ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳು, ಸಾಮಾಜಿಕ ಭದ್ರತೆ, ಸ್ಥಳೀಯ ಆರ್ಥಿಕ ಚಟುವಟಿಕೆಗಳು ಹಾಗೂ ಇತರೆ ಚಟುವಟಿಕೆಗಳನ್ನು ಆಧರಿಸಿ ಸಿದ್ದಪಡಿಸುವುದು. ಪ್ರತಿ ವಲಯವಾರು ಸಾಮಾಜಿಕ ಹಾಗೂ ಮೂಲಸೌಕರ್ಯ ಅಗತ್ಯತೆಗಳನ್ನು ಅನುಬಂಧ-1 ರಲ್ಲಿರುವಂತೆ ಗುರುತಿಸುವುದು. ಹಾಗೆಯೇ ನಿಗದಿಪಡಿಸಲಾದ ಗುರಿಗಳನ್ನು ಹಂತಹಂತವಾಗಿ ಸಾಧಿಸಲು ಅನುದಾನಗಳ ಲಭ್ಯತೆಯನ್ವಯ ಕ್ರಮ ಕೈಗೊಳ್ಳುವುದು.

ಮೇಲಿನ ಈಡೇರಿಕೆಗಾಗಿ ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ತಯಾರಿಸಲು ಈ ಕೆಳಕಂಡಂತೆ ಪ್ರಕ್ರಿಯೆಗಳನ್ನು ಕೈಗೊಳ್ಳುವುದು.

1. ಗ್ರಾಮ ಪಂಚಾಯತಿ ಯೋಜನಾ ತಂಡದ ರಚನೆ – ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು / ಸಿಬ್ಬಂದಿ, ನಿವೃತ್ತ ನೌಕರರು, ಸ್ಥಳೀಯ ವಿಷಯ ತಜ್ಞರು, ಸ್ಥಳೀಯ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು, ಜಿ.ಪಿ.ಎಲ್.ಎಫ್. ಪ್ರತಿನಿಧಿಗಳು / ಮಹಿಳಾ ಸ್ವಸಹಾಯ ಸಂಘಗಳ ಗುಂಪಿನ ಪ್ರತಿನಿಧಿ ಹಾಗೂ ಗ್ರಾಮ ಪಂಚಾಯಿತಿ ಅವಶ್ಯವೆಂದು ಪರಿಗಣಿಸುವ ಇತರೆ ಸದಸ್ಯರನ್ನೊಳಗೊಂಡಂತೆ ಗ್ರಾಮ ಪಂಚಾಯಿತಿ ಮಟ್ಟದ ತಂಡ ರಚಿಸುವುದು.
2. ಜಿಲ್ಲಾ ಪಂಚಾಯಿತಿ ಮಟ್ಟದಿಂದ ಗ್ರಾಮ ಪಂಚಾಯಿತಿ ಮಟ್ಟದವರೆವಿಗೆ ಭಾಗೀದಾರರುಗಳಿಗೆ ತರಬೇತಿಯ ಆಯೋಜನೆ ಮಾಡುವುದು.
3. ಗ್ರಾಮ ಪಂಚಾಯತಿ ಯೋಜನಾ ತಂಡದ ನೆರವಿನಿಂದ ವಾರ್ಡ್ ಸಭೆ ಹಾಗೂ ಗ್ರಾಮ ಸಭೆ ಆಯೋಜನೆ ಮಾಡುವುದು.
4. ಗ್ರಾಮವಾರು ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ ತಯಾರಿಸುವುದು.
5. ಗ್ರಾಮ ಸಭೆಗಳಲ್ಲಿ ಜನರ ಸಹಭಾಗಿತ್ವದೊಡನೆ ಪ್ರಾಥಮಿಕ ಮತ್ತು ದ್ವಿತೀಯ ಅಂಕಿ-ಅಂಶಗಳ ಸಂಗ್ರಹಣೆ ಮಾಡುವುದು.

6. ಗ್ರಾಮ ಪಂಚಾಯತಿ ಯೋಜನಾ ತಂಡ ಮತ್ತು ಸಂಬಂಧಿಸಿದ ವಲಯಗಳ ಅಧಿಕಾರಿ / ಸಿಬ್ಬಂದಿಗಳಿಂದ ವಾಸ್ತವ ಸ್ಥಿತಿಯ ವಿಶ್ಲೇಷಣೆ ಮಾಡಿಸುವುದು.
7. ಗ್ರಾಮ ಪಂಚಾಯತಿ ಯೋಜನಾ ತಂಡ ಮತ್ತು ಸಂಬಂಧಿಸಿದ ವಲಯಗಳ ಅಧಿಕಾರಿ / ಸಿಬ್ಬಂದಿಗಳ ಸಮನ್ವಯತೆಯಿಂದ ಆದ್ಯತೆ ಮೇರೆ ಗುರಿಗಳನ್ನು ನಿರ್ಧರಿಸುವುದು.
8. ಅನುಬಂಧ-1 ಮತ್ತು 2 ಅನ್ನು ಬಳಕೆ ಮಾಡಿಕೊಂಡು ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಿ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆಯುವುದು.

ಗ್ರಾಮ ಪಂಚಾಯಿತಿಗಳು ಅನುಮೋದಿಸಿದ ದೂರದೃಷ್ಟಿ ಯೋಜನೆಯನ್ನು ಪಂಚತಂತ್ರದಲ್ಲಿ ಅಳವಡಿಸುವುದು.

ಮೇಲಿನ ಪ್ರಕ್ರಿಯೆ ಮೂಲಕ ಜನರ ಯೋಜನೆ ತಯಾರಿಕೆಯನ್ನು ಆಗಸ್ಟ್ 15 ರಿಂದ ಸೆಪ್ಟೆಂಬರ್ 30, 2021 ರೊಳಗೆ ಪೂರ್ಣಗೊಳಿಸಿ ಅಕ್ಟೋಬರ್ 2 ರಂದು ಪ್ರಕಟಿಸಲು ನಿರ್ದೇಶಿಸಿದೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು
5. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಜಿಲ್ಲಾ ಪಂಚಾಯತ್ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
7. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ / ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
8. ಕಛೇರಿ ಪ್ರತಿ.

## ಅನುಬಂಧ – 1

## ದೂರದೃಷ್ಟಿ ಯೋಜನೆ

ಜಿಲ್ಲಾ ಪಂಚಾಯಿತಿ :____________________

ತಾಲ್ಲೂಕು ಪಂಚಾಯಿತಿ : ____________________

ಗ್ರಾಮ ಪಂಚಾಯಿತಿ : ____________________

| ವಲಯ | ಗುರುತಿಸಿದ ಬೇಡಿಕೆ | ಬೇಡಿಕೆಯ ವಿವರಗಳು | ಗುರಿ | ಮೊದಲ ಹಂತದ ಗುರಿ | ಎರಡನೇ ಹಂತದ ಗುರಿ | ಮೂರನೇ ಹಂತದ ಗುರಿ | ಸಂಬಂಧಿಸಿದ ಇಲಾಖೆ | ಅನುದಾನದ ಮೂಲ |
|---|---|---|---|---|---|---|---|---|
| ಆರೋಗ್ಯ | ಸಾಮಾಜಿಕ | ಚುಚ್ಚುಮದ್ದು | ಶೇ. 100 ರಷ್ಟು ಚುಚ್ಚುಮದ್ದು | | | | | |
| | | ತಾಯಂದಿರ ಮರಣ | ಶೂನ್ಯ ತಾಯಂದಿರ ಮರಣ | | | | | |
| | | ಶಿಶು ಮತ್ತು ಮಕ್ಕಳ ಮರಣ | ಶೂನ್ಯ ಶಿಶು ಮತ್ತು ಮಕ್ಕಳ ಮರಣ | | | | | |
| | | ಸಾಂಕ್ರಾಮಿಕವಲ್ಲದ ಕಾಯಿಲೆಗಳ ಗುರುತಿಸುವಿಕೆ | ಶೇ.100 ರಷ್ಟು ಗುರುತಿಸುವಿಕೆ ಮತ್ತು ಚಿಕಿತ್ಸೆ | | | | | |
| | | ಸಾಂಕ್ರಾಮಿಕ ಕಾಯಿಲೆಗಳು | ಮುನ್ನೆಚ್ಚರಿಕೆ ಮತ್ತು ತಡೆಗಟ್ಟುವುದು | | | | | |
| | | | | | | | | |
| | ಮೂಲಸೌಕರ್ಯ | ಉಪಕೇಂದ್ರದ ವ್ಯವಸ್ಥೆಗಳು | | | | | | |
| | | ಆಶಾ ಮತ್ತು ಕಿ.ಆ.ಸ.ಯರಿಗೆ ಅಗತ್ಯ ಸೇವೆಗಳು | | | | | | |
| | | ಪ್ರಾ.ಆ.ಕೇ.ದ ವ್ಯವಸ್ಥೆ | | | | | | |

| ವಲಯ | ಗುರುತಿಸಿದ ಬೇಡಿಕೆ | ಬೇಡಿಕೆಯ ವಿವರಗಳು | ಗುರಿ | ಮೊದಲ ಹಂತದ ಗುರಿ | ಎರಡನೇ ಹಂತದ ಗುರಿ | ಮೂರನೇ ಹಂತದ ಗುರಿ | ಸಂಬಂಧಿಸಿದ ಇಲಾಖೆ | ಅನುದಾನದ ಮೂಲ |
|---|---|---|---|---|---|---|---|---|
| | | ಸಂಚಾರಿ ಚಿಕಿತ್ಸಾಲಯ | | | | | | |
| | | | | | | | | |
| ಶಿಕ್ಷಣ | ಸಾಮಾಜಿಕ | ದಾಖಲಾತಿ | | | | | | |
| | | ಉಳಿಸಿಕೊಳ್ಳುವಿಕೆ | | | | | | |
| | | ಪೂರ್ಣಗೊಳಿಸುವಿಕೆ | | | | | | |
| | | ಸಾಕ್ಷರತೆ ಪ್ರಮಾಣ | | | | | | |
| | | ಗ್ರಂಥಾಲಯ ದಾಖಲಾತಿ | | | | | | |
| | | | | | | | | |
| | ಮೂಲಸೌಕರ್ಯ | ಶಾಲಾ ಮೂಲಸೌಕರ್ಯ | | | | | | |
| | | ಗ್ರಂಥಾಲಯ ಮೂಲಸೌಕರ್ಯ | | | | | | |
| | | ಶೌಚಾಲಯ ವ್ಯವಸ್ಥೆ | | | | | | |
| | | ಕುಡಿಯುವ ನೀರಿನ ವ್ಯವಸ್ಥೆ | | | | | | |
| | | ಗಣಕಯಂತ್ರ / ಸ್ಮಾರ್ಟ್ ಶಾಲಾ ಕೊಠಡಿಯ ವ್ಯವಸ್ಥೆ | | | | | | |
| ಮಹಿಳಾ ಮತ್ತು ಮಕ್ಕಳು | ಸಾಮಾಜಿಕ | ಪ್ರಸವ ಪೂರ್ವ ಆರೈಕೆ | | | | | | |
| | | ಪೌಷ್ಟಿಕಾಂಶದ ಪೂರಕಾಂಶಗಳು | | | | | | |
| | | ಅಪೌಷ್ಟಿಕ ಮಕ್ಕಳು | | | | | | |
| | | | | | | | | |
| | | | | | | | | |
| | | | | | | | | |
| | ಮೂಲಸೌಕರ್ಯ | ಅ.ಕೇಂದ್ರದ ಸ್ವಂತ | | | | | | |

| ವಲಯ | ಗುರುತಿಸಿದ ಬೇಡಿಕೆ | ಬೇಡಿಕೆಯ ವಿವರಗಳು | ಗುರಿ | ಮೊದಲ ಹಂತದ ಗುರಿ | ಎರಡನೇ ಹಂತದ ಗುರಿ | ಮೂರನೇ ಹಂತದ ಗುರಿ | ಸಂಬಂಧಿಸಿದ ಇಲಾಖೆ | ಅನುದಾನದ ಮೂಲ |
|---|---|---|---|---|---|---|---|---|
| | | ಕಟ್ಟಡ | | | | | | |
| | | ಶೌಚಾಲಯ ವ್ಯವಸ್ಥೆ | | | | | | |
| | | ಕುಡಿಯುವ ನೀರಿನ ವ್ಯವಸ್ಥೆ | | | | | | |
| | | ಅಡುಗೆ ಮನೆ | | | | | | |
| | | ಆಟೋಪಕಾರಣಗಳು | | | | | | |
| | | | | | | | | |
| ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳು | ಸಾಮಾಜಿಕ | ಜೀವ ವೈವಿಧ್ಯತೆ | ಗುಂಡು ತೋಪುಗಳ ಪುನರುಜ್ಜೀವನ | | | | | |
| | | ಅಂತರ್ಜಲದ ಕುಸಿತ | 5 ವರ್ಷದಲ್ಲಿ ಶೇ.50ರಷ್ಟು ಅಂತರ್ಜಲವನ್ನು ಹೆಚ್ಚಿಸುವುದು | | | | | |
| | | ಕಡಿಮೆಯಾಗುತ್ತಿರುವ ಅರಣ್ಯ ಪ್ರದೇಶ | 5 ವರ್ಷದಲ್ಲಿ ಶೇ.10ರಷ್ಟು ಅರಣ್ಯ ಪ್ರದೇಶವನ್ನು ಹೆಚ್ಚಿಸುವುದು | | | | | |
| | | ಜೋಗು ಪ್ರದೇಶ | 5 ವರ್ಷದಲ್ಲಿ ಶೇ.50ರಷ್ಟು ಜೋಗು ಪ್ರದೇಶವನ್ನು ಕಡಿಮೆಗೊಳಿಸುವುದು | | | | | |
| | | ನೀರಿನ ಲವಣಾಂಶ | | | | | | |
| | | | | | | | | |
| | ಮೂಲಸೌಕರ್ಯ | ನರ್ಸರಿಗಳ ಸ್ಥಾಪನೆ | | | | | | |
| | | ಕೆರೆಗಳ ನಿರ್ವಹಣೆ ಮತ್ತು ಪುನರುಜ್ಜೀವನ | | | | | | |
| | | ನೀರು ಮರುಪೂರಣ | | | | | | |

| ವಲಯ | ಗುರುತಿಸಿದ ಬೇಡಿಕೆ | ಬೇಡಿಕೆಯ ವಿವರಗಳು | ಗುರಿ | ಮೊದಲ ಹಂತದ ಗುರಿ | ಎರಡನೇ ಹಂತದ ಗುರಿ | ಮೂರನೇ ಹಂತದ ಗುರಿ | ಸಂಬಂಧಿಸಿದ ಇಲಾಖೆ | ಅನುದಾನದ ಮೂಲ |
|---|---|---|---|---|---|---|---|---|
| | | ರಚನೆಗಳ ಸ್ಥಾಪನೆ | | | | | | |
| | | | | | | | | |
| | | | | | | | | |
| ಸಾಮಾಜಿಕ ಭದ್ರತೆ | ಸಾಮಾಜಿಕ | ಪಿಂಚಣಿಗಳು | | | | | | |
| | | ಉದ್ಯೋಗ | | | | | | |
| | | | | | | | | |
| | | | | | | | | |
| | ಮೂಲಸೌಕರ್ಯ | ಎಲ್ಲಾ ಸೌಲಭ್ಯ ಸಹಿತ ವಸತಿ | | | | | | |
| | | ಹಿರಿಯ ನಾಗರೀಕರ / ವಿಕಲಚೇತನರ ಆರೈಕೆ ಕೇಂದ್ರಗಳ ಸ್ಥಾಪನೆ | | | | | | |
| | | ರಸ್ತೆಗಳು | | | | | | |
| | | ಚರಂಡಿಗಳು | | | | | | |
| | | ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಘಟಕದ ಸ್ಥಾಪನೆ | | | | | | |
| | | | | | | | | |
| | | | | | | | | |
| ಸ್ಥಳೀಯ ಆರ್ಥಿಕ ಚಟುವಟಿಕೆಗಳು | ಸಾಮಾಜಿಕ | ಆದಾಯ ಉತ್ಪನ್ನ ಚಟುವಟಿಕೆಗಳು | | | | | | |
| | | ಗ್ರಾ.ಪಂ. ಸಂಪನ್ಮೂಲ ಕ್ರೋಢೀಕರಣ | | | | | | |
| | | ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳು | | | | | | |
| | | ಆರ್ಥಿಕ ಜೋಡಣೆ | | | | | | |
| | | | | | | | | |

| ವಲಯ | ಗುರುತಿಸಿದ ಬೇಡಿಕೆ | ಬೇಡಿಕೆಯ ವಿವರಗಳು | ಗುರಿ | ಮೊದಲ ಹಂತದ ಗುರಿ | ಎರಡನೇ ಹಂತದ ಗುರಿ | ಮೂರನೇ ಹಂತದ ಗುರಿ | ಸಂಬಂಧಿಸಿದ ಇಲಾಖೆ | ಅನುದಾನದ ಮೂಲ |
|---|---|---|---|---|---|---|---|---|
| | | | | | | | | |
| | ಮೂಲಸೌಕರ್ಯ | ವರ್ಕ್ ಶೆಡ್‌ಗಳ ನಿರ್ಮಾಣ | | | | | | |
| | | ವೃತ್ತಿಪರ ಕೌಶಲ್ಯ ಕೇಂದ್ರಗಳ ಸ್ಥಾಪನೆ | | | | | | |
| | | | | | | | | |
| | | | | | | | | |
| ಇತರೆ (ನಮೂದಿಸಿ) | ಸಾಮಾಜಿಕ | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | ಮೂಲಸೌಕರ್ಯ | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |

## ಅನುಬಂಧ – 2

## ದೂರದೃಷ್ಟಿ ಯೋಜನೆ

ಜಿಲ್ಲಾ ಪಂಚಾಯಿತಿ :____________________

ತಾಲ್ಲೂಕು ಪಂಚಾಯಿತಿ : ____________________

ಗ್ರಾಮ ಪಂಚಾಯಿತಿ : ____________________

| ಕ್ರ.ಸಂ. | ಬೇಡಿಕೆ / ಸೂಚ್ಯಾಂಕ | ಹಂತದ ಗುರಿ (ಅನುಬಂಧ–1ರಂತೆ) | ಪ್ರಸ್ತುತ ಸ್ಥಿತಿ | ಒಟ್ಟಾರೆ ಅಗತ್ಯ / ಸಾಧನೆ | 2025ಕ್ಕೆ ನಿರೀಕ್ಷಿತ ಸಾಧನೆ | 21–22 | 22–23 | 23–24 | 24–25 | 25–26 |
|---|---|---|---|---|---|---|---|---|---|---|
| 1. | | | | | | | | | | |
| 2. | | | | | | | | | | |